C.C. No.-6700/2025
CW-3 / PW-5

ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಕಾರಟಗಿ.
ಸಾಕ್ಷಿಯನ್ನು ದಿನಾಂಕ- **23.02.2026** ರಂದು ಕರೆಯಿಸಿ ಪ್ರಾಮಾಣೀಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು- | ಸುರೇಶ |
| ತಂದೆ / ಗಂಡನ ಹೆಸರು- | ಮುದಕಪ್ಪ |
| ವಯಸ್ಸು- | 31 ವರ್ಷಗಳು |
| ಉದ್ಯೋಗ- | ಪೋಲಿಸ್ ಕಾನಸ್ಟೇಬಲ್, ಕಾರಟಗಿ |
| ವಾಸಸ್ಥಳ- | ಕಾರಟಗಿ |

ಮುಖ್ಯ ವಿಚಾರಣೆ- ಸ. ಸ. ಅ. ಅವರಿಂದ-

1. ದಿನಾಂಕಃ 31-07-2025 ರಿಂದ ಇಲ್ಲಿಯವರೆಗೆ ಕಾರಟಗಿ ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಕೆಲಸ ಮಾಡುತ್ತಿದ್ದೇನೆ.

2. ನಾನು ದಿನಾಂಕಃ 17-08-2025 ರಂದು ರಾತ್ರಿ ಗಸ್ತು ಕರ್ತವ್ಯ ಮಾಡುತ್ತಿದ್ದಾಗ ಚಾಸಾ-4 ರವರೊಂದಿಗೆ ರಾತ್ರಿ ಗಸ್ತು ಕರ್ತವ್ಯ ಕುರಿತು ಹೋಗಿದ್ದು ಕರ್ತವ್ಯವನ್ನು ನಿರ್ವಹಿಸುತ್ತಿರುವಾಗ ದಿನಾಂಕಃ 18-08-2025 ರಂದು ಬೆಳಿಗ್ಗೆ 4-30 ಗಂಟೆಯ ರಾತ್ರಿ ಗಸ್ತು ಕರ್ತವ್ಯಕ್ಕೆ ಹೋಗಿದ್ದ ಸಿಬ್ಬಂದಿಯವರಾದ ನಾನು ಮತ್ತು ಚಾಸಾ-4 ರವರನ್ನು ಗಸ್ತು ಕರ್ತವ್ಯ ನಿರ್ವಹಿಸುತ್ತಾ ಕಾರಟಗಿ ಪಟ್ಟಣದ ನವಲಿ ವೃತ್ತದ ಸಂಶಯಾಸ್ಪದವಾಗಿ ತಿರುಗಾಡುತ್ತಿದ್ದು ಆಗ ಪೋಲಿಸರನ್ನು ನೋಡಿ ತಮ್ಮ ಇರುವುಕೆಯನ್ನು ಮರೇ ಮಾಚಿಕೊಳ್ಳಲು ಪ್ರಯತ್ನಿಸಿದ್ದು ಆಗ ನಾವು ವ್ಯಕ್ತಿಯನ್ನು ವಿಚಾರಣೆ ಮಾಡಲಾಗಿ ಸದರಿಯವರು ತನ್ನ ಹೆಸರನ್ನು ಹೇಳಲು ನಿರಾಕರಿಸಿದ್ದು ನಂತರ ಆತನನ್ನು ಠಾಣೆಗೆ ಕರೆದುಕೊಂಡು ಹೋಗಿ ವಿಚಾರಿಸಲಾಗಿ ಆತನು ತನ್ನ ಹೆಸರು ರಹಿಂ ಶೇಖ ಅಲಿಯಾಸ್ ಶೇಖ್ ರಹಿಮಾನ್ ತಂದೆ ಶೇಖ್ ಮುಸ್ತಾ ಅಲಿ, ವಯಸ್ಸುಃ 54 ವರ್ಷ, ಜಾಃ ಮುಸ್ಲಿಂ, ಉಃ ಕೂಲಿಕೆಲಸ, ಸಾಃ ವಡ್ಡರಹಟ್ಟಿ ಕ್ಯಾಂಪ, ಹಾ.ವಃ ಯುಸೂಬ್ ಬಾಬಾ ದರ್ಗಾ ಎದುರುಗಡೆ ನ್ಯೂ ಆಗಾಪೂರ ನಾಮಪಲ್ಲಿ ಹೈದ್ರಾಬಾದ್ ಅಂತಾ ಹೇಳಿದ್ದು, ಆಗ ಆತನನ್ನು ಕೂಲಂಕುಷವಾಗಿ ವಿಚಾರಣೆಗೆ ಒಳಪಡಿಸಲಾಗಿ ಸದರಿ ವ್ಯಕ್ತಿಯು ತಾನು ಈ ಹಿಂದೆ ಕಾರಟಗಿ ಪಟ್ಟಣದಲ್ಲಿ ಬಂದು

ಕಳ್ಳತನ ಮಾಡಿರುವ ಬಗ್ಗೆ ತಿಳಿಸಿದ್ದು, ಈ ಹಿಂದೆ ಕೀಲೆಯನ್ನು ಕಬ್ಬಿಣದ ರಾಡಿನಿಂದ ಮೂರಿದು ಮನೆಯಲ್ಲಿ ಹೋಗಿ ಬೆಡ್ ರೂಮಿನಲ್ಲಿ ಅಲಮಾರಿಯನ್ನು ದಿನಾಂಕಃ 15-11-2023 ರಂದು ಬೆಳಿಗ್ಗೆ 11.00 ಗಂಟೆಯಿಂದ ದಿನಾಂಕಃ 15-11-023 ರಂದು ಸಂಜೆ 5-00 ಅವಧಿಯಲ್ಲಿ ಮೂರಿದು ಅದರಲ್ಲಿ ಸಿಕ್ಕ ಸುಮಾರು ಟ್ರಿಜರಿಯಲ್ಲಿದ್ದ ಬಂಗಾರದ ಅರ್ಧ ತೊಲೆಯ ಒಂದು ಜೊತೆ ಜುಮಕಿ, ಅರ್ಧ ತೋಲೆಯ ಡ್ರಾಪ್ಸ್, ಮತ್ತು ಗಂಡು ಅರ್ಧ ತೊಲೆಯ ಕಿವಿಯೊಳಗಿನ ರಂಗ್ ಹೀಗೆ ಒಟ್ಟು ಒಂದುವರೆ ತೊಲೆ ಬಂಗಾರದ ಆಭರಣಗಳು ಅಂ.ಕಿ.ರೂ.75,000/- ಮತ್ತು ರೂ.15,000/- ರೂ ನಗದು ಹಣ ಕಳ್ಳತನ ಮಾಡಿಕೊಂಡು ಹೋಗಿರುವ ಬಗ್ಗೆ ತಿಳಿಸಿದ್ದು ಇರುತ್ತದೆ.

3. ನಂತರ ಆರೋಪಿತನಾದ ರಹಿಂ ಶೇಖ ಅಲಿಯಾಸ್ ಶೇಖ್ ರಹಿಮಾನ್ ತಾನು ಕಳ್ಳತನ ಮಾಡಿಕೊಂಡು ಸದರಿ ಬಂಗಾರ ಮತ್ತು ಹಣವನ್ನು ತೆಗೆದುಕೊಂಡು ಬಂಗಾರಣ ಆಭರಣಗಳನ್ನು ದಾರಿ ಹೋಕರಿಗೆ ಮಾರಾಟ ಮಾಡಿ ಬಂದಿರುವ ಹಣದಲ್ಲಿ ರೂ.40,000/-ಮತ್ತು ರೂ.15,000/- ನಗದು ಹಣವನ್ನು ನನ್ನ ಬಳಿ ಇಟ್ಟುಕೊಂಡಿದ್ದು ಇರುತ್ತದೆ. ನಂತರ ನಾನು ಅವಶ್ಯಕತೆ ಇದ್ದಾ ಹಣವನ್ನು ಬಳಕೆ ಮಾಡಿಕೊಂಡು ಮತ್ತು ಊರು ಊರುಗಳಲ್ಲಿ ತಿರುಗಾಡಿ ಬೀಗ ಹಾಕಿದ ಮನೆಗಳನ್ನು ವಿಲಾಸಿ ಜೀವನದಲ್ಲಿ ಹಣವನ್ನು ಬಳಕೆ ಮಾಡಿಕೊಂಡಿದ್ದು ಹಾಗೂ ಬೀಗ ಹಾಕಿದ ಮನೆಗಳನ್ನು ಕಳ್ಳತನ ಮಾಡುವ ಕುರಿತು ಬೇರೆ ಬೇರೆ ಊರುಗಳಲ್ಲಿ ತಿರುಗಾಡುತ್ತಿದ್ದು ಇರುತ್ತದೆ. ಆರೋಪಿತನು ಹೈದ್ರಾಬಾದಿಗೆ ಹೋಗುವ ಸಲುವಾಗಿ ಗಂಗಾವತಿಯಿಂದ ಕಾರಟಗಿ ಮಾರ್ಗವಾಗಿ ಹೈದ್ರಾಬಾದಿಗೆ ಹೋಗುವ ಕುರಿತು ಕಾರಟಗಿಯಲ್ಲಿ ಇಳಿದಾಗ ನಾವು ವಿಚಾರಣೆ ಕುರಿತು ಕರೆತಂದಾಗ ಆರೋಪಿತನು ತಾನು ಈ ಹಿಂದೆ ಮಾಡಿದ ಕಳ್ಳತನ ಬಗ್ಗೆ ವಿಚಾರ ತಿಳಿಸಿದ್ದು ಹಾಗೂ ಆರೋಪಿತನು ತೋರಿಸಿದಂತೆ ಕಳ್ಳತನ ಮಾಡಿರುವ ಮನೆಯನ್ನು ತೋರಿಸಿದ್ದು ಅವನ ಅಂಗ ಜಪ್ತಿ ಮಾಡಲು ಅವನ ಹತ್ತಿರ ಇದ್ದ ಸುಮಾರು ರೂ.65,000/- ಸಾವಿರ ಹಣವನ್ನು ಸಹ ಪಂಚರ ಸಮಕ್ಷಮ ಜಪ್ತಿಪಡಿಸಿಕೊಂಡಿದ್ದು ಇರುತ್ತದೆ. ಆರೋಪಿತನು ಕಳ್ಳತನ ಮಾಡಿರುವ ಬಗ್ಗೆ ಆರೋಪಿತನ ಸ್ವ-ಖುಷಿ ಹೇಳಿಕೆಯಿಂದ ತಿಳಿದಿದ್ದು ಇರುತ್ತದೆ. ಇದ್ದ ಸಂಗತಿಯ ಬಗ್ಗೆ ಈ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

<u>ಪಾಟೀಸವಾಲು- ಶ್ರೀ ಹೆಚ್.ಬಿ.ಎ ಆರೋಪಿ ಪರ ವಕೀಲರಿಂದ-</u>

4. ಆ ದಿನ ನನಗೆ 1 ಮತ್ತು 2 ಬೀಟ್‌ನಲ್ಲಿ ಕರ್ತವ್ಯವಿತ್ತು. ಅದನ್ನು ನನ್ನ ಹೇಳಿಕೆಯಲ್ಲಿ ನಮೂದಿಸಿರುವುದಿಲ್ಲ. ರಾತ್ರಿ 10.00 ರಿಂದ ಬೆಳಿಗ್ಗೆ 5.30 ರವರೆಗೆ ಬೀಟ್ ಡ್ಯೂಟಿ ಇರುತ್ತದೆ. ಆ ದಿನ ನಾನು ಮತ್ತು ಚಾಸಾ-4 ಬೀಟ್ ಕರ್ತವ್ಯದಲ್ಲಿ ಇದ್ದೇವು. ಆ ದಿನ ಆರೋಪಿಯನ್ನು ನವಲಿ ಸರ್ಕಲ್‌ನಲ್ಲಿರುವ ಕರೆಪ್ಪ ದೇವಸ್ಥಾನದ ಹತ್ತಿರ ನೋಡಿರುತ್ತೇನೆ. ಈ ವಿಷಯವನ್ನು ನನ್ನ ಹೇಳಿಕೆಯಲ್ಲಿ ಬರೆಸಿರುವುದಿಲ್ಲ. ಆದರೆ ನವಲಿ ಸರ್ಕಲ್ ಎಂದು ಬರೆಸಿರುತ್ತೇನೆ. ಆ ದಿನ ಆರೋಪಿ ನಿಮ್ಮನ್ನು ನೋಡಿ ಓಡಿ ಹೋದನೇ ಎಂದರೆ ಸ್ವಲ್ಪ ದೂರ ಓಡಿ ಹೋಗಿ ನಂತರ ಮರೆಮಾಚಿಕೊಂಡಿರುತ್ತಾನೆ ಎಂದು ನುಡಿಯುತ್ತಾರೆ. ಆ ದಿನ ಆರೋಪಿಯನ್ನು ಹಿಡಿದುಕೊಂಡ ಮೇಲೆ ಆತನ ಮನೆಯವರಿಗೆ ತಿಳಿಸಿರುವುದಿಲ್ಲ. ನಂತರ ಠಾಣೆಗೆ ಬಂದು ಆತನ ಮನೆಯವರಿಗೆ ತಿಳಿಸಿರುತ್ತೇವೆ. ಯಾವುದೇ ಆರೋಪಿಯನ್ನು ಕರೆದುಕೊಂಡು ಹೋಗಬೇಕಾದ್ದಲ್ಲಿ ಸಮಾಜದ ಗಣ್ಯವ್ಯಕ್ತಿಯ ಕಡೆಯಿಂದ ಸಹಿ ಪಡೆಯಬೇಕು ಎಂದರೆ ಅದು ಚಾಸಾ-1 ರವರು ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಹೇಳಿಕೆಯಲ್ಲಿ ಗಣ್ಯ ವ್ಯಕ್ತಿಯ ಕಡೆಯಿಂದ ಸಹಿಪಡೆದ ಬಗ್ಗೆ ನಮೂದಿಸಿರುತ್ತೇನೆ. ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ. ಆರೋಪಿ ತಾನು ಬಂಗಾರ ಮತ್ತು ಹಣವನ್ನು ಕಳುವು ಮಾಡಿದ ಬಗ್ಗೆ ನನಗೆ ತಿಳಿಸಿರುತ್ತಾನೆ. ಆ ದಿನ ಆರೋಪಿಯ ಕಡೆಯಿಂದ ರೂ.65,000/- ವಶಪಡಿಸಿಕೊಂಡಿರುತ್ತೇವೆ. ಯಾವ ಮುಖಬೆಲೆಯ ಹಣವನ್ನು ವಶಪಡಿಸಿಕೊಂಡಿರುತ್ತೀರಿ ಎಂದರೆ ನಿಮ್ಮ ಹೇಳಿಕೆಯಲ್ಲಿ ನಮೂದಿಸಿರುತ್ತೀರಿ ಎಂದರೆ ಸರಿ. ಸಾಮಾನ್ಯವಾಗಿ ದಾರಿ ಹೋಕರಿಗೆ ಬಂಗಾರವನ್ನು ನೀಡಿದರೆ ಅವರು ಠಾಣೆಗೆ ಬಂದು ತಿಳಿಸುತ್ತಾರೆ ಎಂದರೆ ಸರಿ. ಆ ದಿನ ಆರೋಪಿಯ ಕಡೆಯಿಂದ ರೂ.65,000/- ಜಪ್ತಿ ಮಾಡುವ ಪೂರ್ವದಲ್ಲಿ ನಿಮ್ಮ ಅಂಗಜಪ್ತಿಯನ್ನು ಮಾಡಿರುತ್ತಾರೆಯೇ ಎಂದರೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಹೇಳಿಕೆಯಲ್ಲಿ ದಾರಿ ಹೋಕರಿಗೆ ಮಾರಾಟ ಮಾಡಿ ಬಂದಿರುವ ಹಣದಲ್ಲಿ ರೂ.40,000/- ಮತ್ತು ರೂ.15,000/- ಎಂದು ನಮೂದು ಇದೆ ಎಂದರೆ ಸರಿ. ಆ ದಿನ ನವಲಿ ಸರ್ಕಲ್‌ನಲ್ಲಿ ಎಷ್ಟು ಜನ ಇದ್ದರು ಎಂದು ನನಗೆ ನೆನಪಿಲ್ಲ. ಅಲ್ಲಿ ಬಸ್

ನಿಲ್ದಾಣ ಇರುವ ಕಾರಣ ಬಹಳ ಜನ ಇರುತ್ತಾರೆ ಎಂದರೆ ಸರಿ. ಆರೋಪಿಯ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಚಾಸಾ-10 ರವರು ನನ್ನ ಮೇಲಾಧಿಕಾರಿಗಳು ಆದಕಾರಣ ಅವರ ಮಾತು ಕೇಳಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ಆತನನ್ನು ನಿಮ್ಮಲ್ಲಿ ಬಾಕಿ ಇರುವ ಪ್ರಕರಣಕ್ಕೆ ಸೇರಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಕಾರಟಗಿ.